
ನರ್ಗಿಸ್ ಫಖ್ರಿ

## ಮದುವೆ ಇಲ್ಲ..!

“ಯಾರು ಹಾಗೆಂದಿದ್ದು? ಸದ್ಯಕ್ಕಂತೂ ನಾನು ಯಾರ ಜತೆಗೂ ಮದುವೆ ಆಗಲ್ಲ. ಸುಮ್ಮನೇ ರೂಮರ್ ಹಬ್ಬಿಸ್ತಾರೆ” ಎಂದು ಸಿಟ್ಟಿಗೆದ್ದು ಹೇಳಿದಾಕೆ ನರ್ಗಿಸ್ ಫಖ್ರಿ. ಜಾಹೀರಾತು ಲೋಕದ ಪ್ರಖ್ಯಾತ ಮಾಡೆಲ್ ಆಗಿ ‘ರಾಕ್ ಸ್ಟಾರ್’ ಮೂಲಕ ಬಾಲಿವುಡ್ ಹೀರೋಯಿನ್ ಆದ ನರ್ಗಿಸ್, ಈಗ ಹೊಸ ಸಿನಿಮಾದಲ್ಲಿ ಬ್ಯುಸಿ. ‘ನರ್ಗಿಸ್‌ಗೆ ಮಾರ್ಚಿ ತಿಂಗಳಲ್ಲಿ ಉದಯ್ ಚೋಪ್ರಾ ಜತೆ ಮದುವೆ ಫಿಕ್ಸ್ ಆಗಿದೆ’ ಎಂದು ಗುಲ್ಲೆದ್ದಿರುವುದೇ ಈಕೆಯ ಈ ಸ್ಪಷ್ಟೀಕರಣಕ್ಕೆ ಕಾರಣ. ಈ ಹಿಂದೆಯೂ ಹೀಗೆಯೇ ನರ್ಗಿಸ್ ಮದುವೆಯ ಬಗ್ಗೆ ಸುದ್ದಿ ಹಬ್ಬಿತ್ತು. ‘ನೆಸ್ ವಾಡಿಯಾ ಜತೆ ಮದುವೆ ಆಗುತ್ತದೆ’ ಎಂದೊಮ್ಮೆ, ಆ ಬಳಿಕ ‘ಶಾಹಿದ್ ಕಪೂರ್ ಜತೆ ಶೀಘ್ರ ಮದುವೆ’ ಎಂದೂ ಸುದ್ದಿ ಹಬ್ಬಿತ್ತು.

ಸದ್ಯಕ್ಕೆ ‘ಮದ್ರಾಸ್ ಕೆಫೆ’ ಎಂಬ ಸಿನಿಮಾದಲ್ಲಿ ಜಾನ್ ಅಬ್ರಹಾಂ ಜತೆ ನರ್ಗಿಸ್ ನಟಿಸುತ್ತಿದ್ದಾಳೆ. ಎಲ್‌ಟಿಟಿಈ ಹೋರಾಟದ ಹಿನ್ನೆಲೆಯ ಈ ಸಿನಿಮಾಕ್ಕೆ ಹಿಂದೆ ಇಟ್ಟ ‘ಜಾಫ್ನಾ’ ಎಂಬ ಹೆಸರನ್ನು ಈಗ ಬದಲಿಸಲಾಗಿದೆ. ಚಿತ್ರದಲ್ಲಿ ನರ್ಗಿಸ್‌ಗಳದ್ದು ಪತ್ರಕರ್ತೆಯ ಪಾತ್ರವಾದರೆ, ಜಾನ್‌ನದ್ದು ಇಂಟೆಲಿಜೆನ್ಸ್ ಅಧಿಕಾರಿಯ ಪಾತ್ರ.

## ಫ್ರೀಡಾ ಬಾಲಿವುಡ್‌ಗೆ?



‘ಸ್ಲಂಡಾಗ್ ಮಿಲಿಯನೇರ್’ ಚಿತ್ರದ ಮೂಲಕ ಹಾಲಿವುಡ್‌ನಲ್ಲಿ ಜನಪ್ರಿಯಳಾಗಿ ಅಲ್ಲೇ ನೆಲೆವೂರಿದ ಮುಂಬೈ ಬೆಡಗಿ ಫ್ರೀಡಾ ಪಿಂಟೊ ಇದೀಗ, ಬಾಲಿವುಡ್ ಸಿನಿಮಾವೊಂದರಲ್ಲಿ ನಟಿಸುವ ಸುದ್ದಿ ಬಂದಿದೆ. ನಿರ್ಮಾಪಕ ವಿಕ್ರಮಾದಿತ್ಯ ಮೋಟ್ವಾನೆ ತಮ್ಮ ಮುಂದಿನ ಚಿತ್ರಕ್ಕೆ ಫ್ರೀಡಾಳ ಕಾಲ್‌ಷೀಟ್ ಕೇಳಿದ್ದು, ಮಾತುಕತೆ ಬಹುತೇಕ ಮುಗಿದಿದೆಯಂತೆ. ಹಾಲಿವುಡ್‌ನಲ್ಲಿ 3–4 ಸಿನಿಮಾಗಳಲ್ಲಿ ನಟಿಸಿ ಬ್ಯುಸಿ ಆಗಿರುವ ಫ್ರೀಡಾ ಸದ್ಯಕ್ಕೆ ‘ಡೆಸರ್ಟ್ ಡ್ಯಾನ್ಸರ್’ ಎಂಬ ಚಿತ್ರದಲ್ಲಿ ನಟಿಸುತ್ತಿದ್ದಾಳೆ. ನೃತ್ಯಕ್ಕೆ ನಿಷೇಧ ಇರುವ ಇರಾನ್‌ನಲ್ಲಿ ನೃತ್ಯದ ಮೂಲಕವೇ ಹೆಸರು ಮಾಡಿದ ನರ್ತಕನೊಬ್ಬನ ನೈಜ ಕಥೆ ಆಧರಿತ ಈ ಚಿತ್ರದ ಬಗ್ಗೆ ಫ್ರೀಡಾ ತುಂಬಾ ನಿರೀಕ್ಷೆ ಇಟ್ಟುಕೊಂಡಿದ್ದಾಳಂತೆ.

■ ಬಿಂದು

